ಶ್ರೀ ಎಸ್. ಬಂಗಾರಪ್ಪ.— ಡೆಲ್ಲಿಯಲ್ಲಿ ಕೂತುಕೊಂಡು ಟೆಲಿಫೋನ್ ಮಾಡಿದರೆ ಅಲ್ಲಿಗೇ ಖರ್ಚು ಬರುತ್ತದೆ.

ಅಧ್ಯಕ್ಷರು.— ಮಾನ್ಯ ವೇದಾಂತ ಹೆಬ್ಬಿಗಯವರ ಪ್ರಶ್ನೆಗೆ ಸಚಿವರು ಕಾಲಾವಕಾಶ ಕೇಳಿದ್ದಾರೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದವರಿಂದ ಬಿಸ್ಕತ್ ವ್ಯಾಪಾರ

೧೬೦೧. ಶ್ರೀ ಎಸ್.ಎಂ. ಆಡ್ಯಂತಾಯ (ಸೂರತ್ಕಲ್).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಬಿಸ್ಕತ್ ವ್ಯಾಪಾರ ಮಾಡಲು ಉದ್ದೇಶಿಸಿರುವುದೇ ?

ಆ) ಹಾಗಿದ್ದಲ್ಲಿ ಈ ಬಿಸ್ಕತ್ ವ್ಯವಹಾರಕ್ಕೆ ತೊಡಗಿದ ಬಂಡವಾಳವೆಷ್ಟು ?

ಇ) ಕೆ.ಎಸ್.ಎಫ್.ಸಿ.ಎಸ್. ಬಿಸ್ಕತ್‌ನ ಸ್ವಯಂ ಉತ್ಪಾದನೆ ಮಾಡುತ್ತಿದೆಯೇ ಅಥವಾ ಖಾಸಗಿಯವರಿಂದ ಖರೀದಿಸಿತ್ತೆ ?

ಈ) ಈ ವ್ಯವಹಾರದಲ್ಲಿ ನಿಗಮಕ್ಕೆ ಆಗಿರುವ ಲಾಭ ನಷ್ಟವೆಷ್ಟು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಉದ್ದೇಶಿಸಲಾಗಿತ್ತು.

ಆ) ರೂ. ೨೪.೨೧,೫೫೬.೭೫

ಇ) ಖಾಸಗಿಯವರಿಂದ ಖರೀದಿಸಲಾಗಿತ್ತು.

ಈ) ಲಾಭವಾಗಲೀ ನಷ್ಟವಾಗಲೀ ಇರುವುದಿಲ್ಲ.

ಆದಾಯ ತೆರಿಗೆ ಹಾಗೂ ಅಬಕಾರಿ ಸುಂಕದಲ್ಲಿ

೧೬೦೫. ಶ್ರೀ ಎ. ಬಿ. ದೇಸಾಯಿ (ಧಾರವಾಡ ಗ್ರಾಮಾಂತರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರವು ಪಡೆಯುತ್ತಿರುವ ಆದಾಯ ತೆರಿಗೆ (ಇನ್‌ಕಮ್ ಟ್ಯಾಕ್ಸ್) ಮತ್ತು ಅಬ್ಕಾರಿ ಸುಂಕ (ಎಕ್ಸೈಜ್ ಡ್ಯೂಟಿ)ದ ಪಾಲಿನ ಹಣದ ಮೊತ್ತವೆಷ್ಟು ? ಹಾಗೂ ಒಟ್ಟು ಆದಾಯದಲ್ಲಿ ಪಡೆಯುತ್ತಿರುವ ಪ್ರತಿಶತ ಹಣದ ಪ್ರಮಾಣವೆಷ್ಟು ?

ಆ) ಈ ಆದಾಯದಲ್ಲಿ ಶೇಕಡಾ ೧೦೦ ರಷ್ಟು ಹಣ ರಾಜ್ಯದಿಂದ ಪಾವತಿಯಾಗಬೇಕಿರುವ ಕಾರಣದಿಂದ ಸಂಪೂರ್ಣ ಮೊಬಲಗು ರಾಜ್ಯ ಸರ್ಕಾರಕ್ಕೆ ದೊರೆಯಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೇ ?

ಇ) ಒತ್ತಾಯಿಸಲಾಗಿದ್ದಲ್ಲಿ ಈ ಕುರಿತಂ ಕೇಂದ್ರ ಸರ್ಕಾರವು ತಾಳಿರುವ ನಿಲುವೇನು ?